**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 25.06.2025**

**ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ ಡಿ ಸಿ ವಕೀಲರಿಂದ**

ನಾನು ಮತ್ತು ನನ್ನ ಚಿಕ್ಕಪ್ಪ ಸಿಸಿ ನಂ **740/2020** ರಲ್ಲಿ ಆರೋಪಿಗಳಾಗಿ ಹಾಜಾರಾಗಿರುತ್ತೇವೆ ಎಂದರೆ ಸರಿ. ಆರೋಪಿ ಕೊಟ್ಟ ದೂರಿನಲ್ಲಿ ನಾನು **2** ನೇ ಆರೋಪಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಆರೋಪಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಯಾವ ಡಯನಿಗ್ನೆಸ್ಟಿಕ್ ಸೆಂಟರನಲ್ಲಿ ಎಕ್ಸರೇ ಮಾಡಿಸಲಾಯಿತು ಎಂದು ನನಗೆ ಗೊತ್ತಿಲ್ಲ. ಡಯನಿಗ್ನೆಸ್ಟಿಕ್ ಸೆಂಟರನಲ್ಲಿ ನನ್ನ ಚಿಕ್ಕಪ್ಪನಿಗೆ ಎಕ್ಸರೇ ತಗಿಸುವ ಸಂದರ್ಬದಲ್ಲಿ ಪ್ರಜ್ಞೆ ಇತ್ತು . ಎಕ್ಸರೇ ಫಿಲಂನ್ನು ನನ್ನ ಕೈಯಾಲ್ಲಾಗಲಿ ನನ್ನ ಚಿಕ್ಕಪ್ಪನ ಕೈಯಲ್ಲಾಗಲಿ ನೀಡಿರುವುದಿಲ್ಲ. ನಾನು ಮದ್ಯಾಹ್ನ **1.30** ಗಂಟೆಯವರೆಗೆ ಅಥವಾ **2.00** ಗಂಟಗೆ ಕುಶಾಲನಗರ ಸರಕಾರಿ ಆಸ್ಪತ್ರೆಯಲ್ಲಿ ಇದ್ದೆ. ತದನಂತರ ನನ್ನ ಚಿಕ್ಕಪ್ಪ ಮನಗೆ ಬಂದಿರುವುದನ್ನು ನಾನು ನೋಡಿರುವುದಿಲ್ಲ. ನಮ್ಮ ಚಿಕ್ಕಪ್ಪನ ಹೆಸರು ಕವಿತಾ. ನಾನು ಆಸ್ಪತ್ರೆಯಿಂಂದ ಹೊರಟ ನಂತರ ನನ್ನ ಚಿಕ್ಕಪ್ಪನ ಜೊತೆ ನನ್ನ ಚಿಕ್ಕಮ್ಮ ಮತ್ತು ಸತೀಶ್ ರವರು ಇದ್ದರು .

ಪುಟ್ಟೆಗೌಡರು ಜಗನ್ನಾಥರವರ ಮೇಲೆ ದೂರು ಕೊಟ್ಟರು ಎಂದು ನನಗೆ ನನ್ನ ಚಿಕ್ಕಪ್ಪ ಹೇಳಿರುತ್ತಾರೆ . ಘಟನೆಯಾದ **2-3** ದಿನಗಳ ನಂತರ ದೂರು ಕೊಟ್ಟಿರುವ ವಿಚಾರ ನನಗೆ ತಿಳಿದು ಬಂತು. ಘಟನೆಯಾದ ಮಾರನೆ ದಿನ ಸಂಜೆ ನನ್ನ ಚಿಕ್ಕಪ್ಪನನ್ನು ನೋಡಿರುತ್ತೇನೆ. ನನ್ನ

ಚಿಕ್ಕಪ್ಪನೊಂದಿಗೆ ನಾನು ಮಾತನಾಡಿರುವುದಿಲ್ಲ. ನನ್ನ ಚಿಕ್ಕಪ್ಪನ ಕಾಲಿಗೇ ನಾನು ಬ್ಯಾಂಡೇಜ್ ಹಾಕಿರುವುದನ್ನು ನಾನು ನೋಡಿರುತ್ತೇನೆ . ನಾನು ನನ್ನ ಚಿಕ್ಕಪ್ಪನಿಗೆ ಫೋನ್ ಮಾಡಿ ಅವರ ಯೋಗ ಕ್ಷೇಮ ವಿಚಾರಿಸಿರುತ್ತೇನೆ. ಆ ಸಂದರ್ಭದಲ್ಲಿ ಘಟನೆ ಬಗ್ಗೆ ನಾನು ಮಾತನಾಡಿರುವುದಿಲ್ಲ. ಈ ಘಟನೆ ಸಂಬಂದ ನಾನು ದಿಃ **28.07.2020** ಅಥವಾ **29.07.2020** ರಂದು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ನನಗೆ ಪೋಲಿಸರು ಫೋನ್ ಮಾಡಿ ಕರೆದಿರುತ್ತಾರೆ. ಯಾವುದೆ ನೋಟಿಸು ನೀಡಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದು ಮರೆತು ಹೋಗಿರುತ್ತೇನೆ . ನಾನು ಮತ್ತು ನನ್ನ ಚಿಕ್ಕಪ್ಪ ಸಮಯ **11** ಗಂಟೆ **21** ನಿಮಿಷ **19** ಸೆಕೆಂಡ್ ಗೆ ಆರೋಪಿಗೆ ದೊಣ್ಣೆಯಿಂದ ಮತ್ತು ಕೈಗಳಿಂದ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಹಲ್ಲೆ ಮಾಡಿದ ಸಮಯದಲ್ಲಿ ಸಾರ್ವಜನಿಕರು ನನ್ನ ಚಿಕ್ಕಪ್ಪ ಕೈಯಲ್ಲಿದ್ದ ದೊಣ್ಣೆಯನ್ನು ಬಿಸಾಡಿದರು ಎಂದರೆ ಸರಿಯಲ್ಲ. **11** ಗಂಟೆ **22** ನಿಮಿಷ **52** ಸೆಕೆಂಡ್ ಗೆ ಅಲ್ಲಿ ನಿಂತಿದ್ದ ಅವರ ಸಂಬಂದಪಟ್ಟಿದ್ದ ಕಾರಿಗೆ ಹೋಗಿ ಹತ್ತಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಅವರು ಕಾರಿನಲ್ಲಿ ಸುಧಾರಿಸಿಕೊಂಡು **11** ಗಂಟೆ **23** ನಿಮಿಷ **20** ಸಕೆಂಡ್ ಗೆ ಹೊರಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಚಿಕ್ಕಪ್ಪ ಆರೋಪಿಗೆ ಹಲ್ಲೆ ಮಾಡಿದ ಪ್ರತಿ ದೃಶ್ಯವೂ ಸತೀಶ್ ರವರ ಅಂಗಡಿ ಸಿಸಿಟಿವಿಯಲ್ಲಿ ಸೆರೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದೃಶ್ಯಾವಳಿಯನ್ನು ಸಿಸಿ ನಂ **740/2020** ರಲ್ಲಿ ಪೋಲಿಸರು ಸಲ್ಲಿಸಿರುತಾತರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಕುಶಾಲನಗರ ರೂರಲ್ ಪೋಲಿಸ್ ಠಾಣೆಯಲ್ಲಿಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸಮಯ **12.30** ಗಂಟೆಗೆ ನಾನು ಮತ್ತು ನನ್ನ ಚಿಕ್ಕಪ್ಪ ರವರ ವಿರುದ್ಧ ಆರೋಪಿಯ ದೂರು ದಾಖಲಿಸಿರವುದು ತಿಳಿದು ನಾನು ಮತ್ತು ಚಿಕ್ಕಪ್ಪ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಬೇಕಾದ ಸುಳ್ಳು ದಾಖಲೆಗಳನ್ನು ನಾನು ಮತ್ತು ನನ್ನ ಚಿಕ್ಕಪ್ಪ ಸೃಷ್ಟಿಸಿರುತ್ತೇವೆ ಎಂರದೆ ಸರಿಯಲ್ಲ. ನಾನು ಹೇಳಿದ ದಿಃ **24.07.2020** ರಂದು ಆರೋಪಿಯು ನನ್ನ ಚಿಕ್ಕಪ್ಪನ ಮೆಲೆ ಯಾವುದೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಮಯ **11.30** ಗಂಟೆಗೆ ನನ್ನ ಚಿಕ್ಕಪ್ಪ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ನನ್ನ ಚಿಕ್ಕಪ್ಪನ ಮೇಲೆ ಆರೋಪಿಯು ಬುಜದ ಮೇಲೆಯಾಗಲಿ ಕಾಲಿನ ಮೇಲೆಯಾಗಲಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನು ನಾನು ನೋಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಚಿಕ್ಕಪ್ಪ ಸೇರಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಕೇಸಿಗೂ ಮತ್ತು ಮು ಮಾ **1** ಕ್ಕೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ **1** ನ್ನು ಪೋಲಿಸರಿಗೆ ನನ್ನ ಚಿಕ್ಕಪ್ಪ ಸೃಷ್ಟಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ